ಪ್ರಜಾವಾಣಿ ಸೋಮವಾರ • ಡಿಸೆಂಬರ್ 25, 2017



ಮುಂದಿನ ತಿಂಗಳು ವರದಿ ಸಿದ್ಧ: ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ ಕಮ್ಮರಡಿ

# ಮದವಾಲ: ರೈತರ ಸ್ಥಿತಿಗತಿ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಗೋಕಾಕ ತಾಲ್ಲೂಕಿನ ಮದವಾಲ ಗ್ರಾಮದಲ್ಲಿ ರೈತರ ಸ್ಥಿತಿಗತಿ ಕುರಿತು ಸಮೀಕ್ಷೆ ಪ್ರಗತಿಯಲ್ಲಿದ್ದು, ಜನವರಿ ಅಂತ್ಯದೊಳಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ ಕಮ್ಮರಡಿ ಇಲ್ಲಿ ಭಾನುವಾರ ತಿಳಿಸಿದರು.

'ರೈತರ ಆದಾಯ ದ್ವಿಗುಣಕ್ಕೆ ಕ್ರಮ ಕೈಗೊಳ್ಳುವ ಪ್ರಸ್ತಾವ ಕೇಂದ್ರ ಸರ್ಕಾರದ್ದಾಗಿದೆ. ಅದಕ್ಕೆ ಪೂರಕವಾಗಿ ಆಯೋಗದಿಂದ ರಾಜ್ಯದ 8 ಹಳ್ಳಿಗಳ ವರದಿ ಸಿದ್ಧಪಡಿಸಲಾಗುತ್ತಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಬೆಳಗಾವಿ, ಚಿತ್ರದುರ್ಗ, ರಾಯಚೂರು, ಕಲಬುರ್ಗಿ, ಹಾವೇರಿ, ತುಮಕೂರು, ಕೋಲಾರ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೊಂದು ಹಳ್ಳಿಯಲ್ಲಿ ಸಮೀಕ್ಷೆ ನಡೆಯುತ್ತಿದೆ. ಮಣ್ಣಿನ ಫಲವತ್ತತೆಯಿಂದ ಹಿಡಿದು ರೈತರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಪ್ರಾಥಮಿಕ ಆರೋಗ್ಯ ವಿಷಯದವರೆಗೆ ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ. ಕಸ್ತೂರ ಬಾ ವೈದ್ಯಕೀಯ ಸಂಸ್ಥೆಯಿಂದ ಎಲ್ಲರ ಆರೋಗ್ಯ ತಪಾಸಣೆ ಮಾಡಿಸಲಾಗಿದೆ. ಮಣ್ಣಿನ ಪರೀಕ್ಷೆ ನಡೆಸಿದ್ದು, ವರದಿ ಕಾಯುತ್ತಿದ್ದೇವೆ' ಎಂದು ಹೇಳಿದರು.

'ಸಮಗ್ರ ಕೃಷಿ ಪದ್ಧತಿ ಅಳವಡಿಸುವಂತೆ ಶಿಫಾರಸು ಮಾಡಲಾಗುವುದು. ಸಮೀಕ್ಷೆ ಮತ್ತಿತರ ಕಾರ್ಯಕ್ಕಾಗಿ ಈ ಹಳ್ಳಿಗಳಿಗೆ ತಲಾ ₹ 25 ಲಕ್ಷ ಅನುದಾನ ಕೊಡಿಸಲಾಗಿದೆ. ಈ ಹಳ್ಳಿಗಳಲ್ಲಿನ ಸ್ಥಿತಿ ಆಧರಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ರೈತರ ಆದಾಯ ವೃದ್ಧಿ ಹಾಗೂ ಕಲ್ಯಾಣಕ್ಕಾಗಿ ನೀಲನಕ್ಷೆಯನ್ನು ಸರ್ಕಾರಕ್ಕೆ ಕೊಡುತ್ತೇವೆ' ಎಂದು ವಿವರಿಸಿದರು.

'ಈ ಹಳ್ಳಿಗಳಲ್ಲಿ ಮೂರು ಸೂತ್ರಗಳನ್ನು ಪಾಲಿಸಲಾಗುವುದು. ವಿಶ್ವವಿದ್ಯಾಲಯಗಳಲ್ಲಿ ಸಿದ್ಧಗೊಳ್ಳುವ ತಂತ್ರಜ್ಞಾನಗಳು ತಲುಪಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರದ 52 ಕಾರ್ಯಕ್ರಮಗಳ ಪ್ರಯೋಜನ ಸಿಗಬೇಕು. ಸಮಗ್ರ ಕೃಷಿ ಪದ್ಧತಿ ಅಳವಡಿಕೆಗೆ ಕ್ರಮ ಕೈಗೊಳ್ಳಲಾಗುವುದು. ರೈತರ ಕೃಷಿ ಆದಾಯ ಜಾಸ್ತಿ ಮಾಡಲು ಮೂರು ವರ್ಷಗಳ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ನಂತರ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಿ, ಒಂದೊಂದು ಹಳ್ಳಿ ಆಯ್ಕೆ ಮಾಡಿಕೊಳ್ಳಲಾಗುವುದು' ಎಂದು ಸ್ಪಷ್ಟಪಡಿಸಿದರು.

'ಪ್ರತಿ ಹಳ್ಳಿಯಲ್ಲೂ 25 ಯುವಕರಿಗೆ ತರಬೇತಿ ನೀಡಲಾಗಿದೆ. ಬೇರೆ ರಾಜ್ಯಕ್ಕೂ ಅವರನ್ನು ಕರೆದೊಯ್ದು ತರಬೇತಿ ಕೊಡಿಸಲಾಗುವುದು. ಕೃಷಿಯಿಂದ ವಿಮುಖವಾಗುತ್ತಿರುವವರನ್ನು ಉಳಿಸಿಕೊಳ್ಳುವ ಕಾರ್ಯ ನಡೆಯಲಿದೆ' ಎಂದರು.ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಜಿ.ಬಿ. ಕಲ್ಯಾಣಿ ಇದ್ದರು.

**ಮುಖ್ಯಾಂಶಗಳು**

- 26 ಬೆಳೆಗಳ ವಸ್ತುಸ್ಥಿತಿ ವರದಿ ಸಿದ್ಧ
- ಬೆಲೆ ಮುನ್ಸೂಚನೆ ವರದಿ ಸರ್ಕಾರಕ್ಕೆ ಸಲ್ಲಿಕೆ
- ಪಡಿತರದೊಂದಿಗೆ 2 ಕೆ.ಜಿ. ಜೋಳ, ರಾಗಿ ವಿತರಣೆ

# ಕೃಷಿ ಉತ್ಪನ್ನಗಳ ಬೆಲೆ ಇಳಿಕೆ

ಬೆಳಗಾವಿ: 'ಗರಿಷ್ಠ ಮುಖಬೆಲೆಯ ನೋಟುಗಳ ಚಲಾವಣೆ ರದ್ದುಪಡಿಸಿದ್ದರಿಂದ ಹಾಗೂ ಜಿಎಸ್‌ಟಿ ಜಾರಿಯಾದ ಪರಿಣಾಮ, ಕೃಷಿ ಉತ್ಪನ್ನಗಳು ಸಮರ್ಪಕವಾಗಿ ಮಾರಾಟವಾಗದೆ ಮಾರುಕಟ್ಟೆಯಲ್ಲೇ ಉಳಿದಿವೆ. ಇದರಿಂದ, ನಂತರದ ಹಂಗಾಮಿನಲ್ಲಿ ಬಂದ ಉತ್ಪನ್ನಗಳ ಬೆಲೆ ಕುಸಿದಿದೆ' ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ ಕಮ್ಮರಡಿ ಇಲ್ಲಿ ಭಾನುವಾರ ತಿಳಿಸಿದರು.

'ರಾಜ್ಯದಲ್ಲಿ ಹೋದ ವರ್ಷಕ್ಕಿಂತ ಹೆಚ್ಚಿನ ಉತ್ಪಾದನೆಯೇನೂ ಬಂದಿಲ್ಲ. ಆದರೂ ಉತ್ಪನ್ನಗಳ ಬೆಲೆಯಲ್ಲಿ ಇಳಿಕೆಯಾಗಿದೆ. ಹೀಗಾಗಿ, ಬೆಂಬಲ ಬೆಲೆ ನೀಡಿ ಖರೀದಿಸಬೇಕು ಎಂದು ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ' ಎಂದು ಮಾಹಿತಿ ನೀಡಿದರು.

'14 ಕೃಷಿ ಹಾಗೂ 12 ತೋಟಗಾರಿಕೆಗೆ ಸಂಬಂಧಿಸಿದ ಪ್ರಮುಖ 26 ಬೆಳೆಗಳ ಉತ್ಪಾದನಾ ವೆಚ್ಚದಿಂದ ಹಿಡಿದು ಮಾರುಕಟ್ಟೆ ಪರಿಸ್ಥಿತಿ ಹಾಗೂ ಬೆಲೆ ಮುನ್ಸೂಚನೆವರೆಗಿನ ವಸ್ತುಸ್ಥಿತಿ ವರದಿ ಸಿದ್ಧಪಡಿಸಲಾಗಿದೆ. ಇದಕ್ಕಾಗಿ ತಂತ್ರಾಂಶ ಸಿದ್ಧಪಡಿಸಲಾಗಿದೆ. ಮೈಕ್ರೋಸಾಫ್ಟ್ ಕಂಪನಿ ಜತೆ ಒಪ್ಪಂದ ಮಾಡಿಕೊಂಡು, ಮಾರುಕಟ್ಟೆವಾರು ಧಾರಣೆಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಕೃಷಿ ಉತ್ಪನ್ನಗಳ ಬೆಲೆ ಇಳಿಕೆಯಾಗುವ ಬಗ್ಗೆ ವೈಜ್ಞಾನಿಕ ವಿಶ್ಲೇಷಣಾ ವರದಿ ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಬೆಲೆ ಸ್ಥಿರೀಕರಣದ ದೃಷ್ಟಿಯಿಂದ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ' ಎಂದು ಹೇಳಿದರು.

'ತೊಗರಿ, ಮುಸುಕಿನಜೋಳ, ರಾಗಿ, ಜೋಳ, ಸೋಯಾಅವರೆ, ಸೂರ್ಯಕಾಂತಿ, ಉದ್ದು, ಹೆಸರು ಹಾಗೂ ಶೇಂಗಾ ಉತ್ಪಾದನಾ ವೆಚ್ಚಕ್ಕಿಂತಲೂ ಕಡಿಮೆ ಬೆಲೆಗೆ ಕುಸಿಯುವ ಸಾಧ್ಯತೆ ಇದೆ. ಈ ರೀತಿಯ ಬೆಲೆ ಮುನ್ಸೂಚನೆಯನ್ನು ಸರ್ಕಾರಕ್ಕೆ ನೀಡುತ್ತಿರುವುದು ನಮ್ಮಲ್ಲೇ ಮೊದಲು' ಎಂದರು.

'ಆಯೋಗದ ಶಿಫಾರಸು ಆಧರಿಸಿ ಜೋಳ ಹಾಗೂ ರಾಗಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿಸುವುದಾಗಿ ಸರ್ಕಾರ ಹೇಳಿದೆ. ವರ್ಷ ಬೆಂಬಲ ಬೆಲೆ ನೀಡಿ 33 ಲಕ್ಷ ಕ್ವಿಂಟಲ್ ತೊಗರಿಯನ್ನು ಸರ್ಕಾರ ಖರೀದಿಸಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ತೊಗರಿಯನ್ನು ಸರ್ಕಾರ ಖರೀದಿಸಿದ್ದು ಇದೇ ಮೊದಲು. ಇದರಿಂದ 1.36 ಲಕ್ಷ ರೈತರಿಗೆ ಅನುಕೂಲವಾಗಿದೆ. ಪಡಿತರದೊಂದಿಗೆ ಒಂದು ಕೆ.ಜಿ. ತೊಗರಿ ಬೇಳೆಯನ್ನು ರಿಯಾಯಿತಿ ದರದಲ್ಲಿ ವಿತರಿಸುತ್ತಿದೆ. ಹೆಸರು ಹಾಗೂ ಕಡಲೆಯನ್ನೂ ಪಡಿತರ ಚೀಟಿದಾರರಿಗೆ ನೀಡಬೇಕು. ಉತ್ತರ ಕರ್ನಾಟಕದಲ್ಲಿ 5 ಕೆ.ಜಿ. ಜೋಳ ಹಾಗೂ ದಕ್ಷಿಣ ಕರ್ನಾಟಕದಲ್ಲಿ 5 ಕೆ.ಜಿ. ರಾಗಿ ನೀಡಬೇಕು ಎಂದು ಶಿಫಾರಸು ಮಾಡಿದ್ದೇವೆ. ಕನಿಷ್ಠ 2 ಕೆ.ಜಿ.ಯನ್ನಾದರೂ ಕೊಡುವ ವಿಶ್ವಾಸವಿದೆ' ಎಂದು ವಿವರಿಸಿದರು.

ಸೋಮವಾರ, 25, ಡಿಸೆಂಬರ್, 2017, ಹುಬ್ಬಳ್ಳಿ

ಸಂಯುಕ್ತ ಕರ್ನಾಟಕ

ಬೆಳಗಾವಿ

# ಪ್ರಮುಖ 22 ಬೆಳೆಗಳಿಗೆ ವಸ್ತುನಿಷ್ಠ ದರ ನಿಗದಿ

**ಬೆಳಗಾವಿ:** ರಾಜ್ಯದ ಪ್ರಮುಖ 22 ಬೆಳೆಗಳ ವಸ್ತುನಿಷ್ಠ ದರ ನಿಗದಿ ಪಡಿಸಲಾಗಿದೆ. ಅದರಲ್ಲಿ 11 ತೋಟಗಾರಿಕೆ ಮತ್ತು 14 ಕೃಷಿ ಸಂಬಂಧಿಸಿದ ಬೆಳೆ ದರ ನಿಗದಿ ಮಾಡಿದ್ದೇವೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ ಕಮ್ಮರಡಿ ಹೇಳಿದರು.



ರವಿವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಬೆಂಬಲ ಬೆಲೆ ಮತ್ತು ತೊಗರಿ ಖರೀದಿಗೆ ಸರ್ಕಾರ ಕ್ರಮಕೈಗೊಂಡಿದೆ. ಜಿಲ್ಲಾಡಳಿತದಿಂದ ಇತ್ತೀಚಿಗೆ ತೊಗರಿ ಜೊತೆಗೆ ಭತ್ತ ಖರೀದಿಗೂ ಸರ್ಕಾರ ಘಟಕ ತೆರೆಯಬೇಕೆಂದು ತಿಳಿಸಿದೆ. ಹೀಗಾಗಿ ಕೆಲವೆ ದಿನಗಳಲ್ಲಿ ಸರ್ಕಾರ ಜಿಲ್ಲೆಯ ಎರಡು ಕಡೆಗಳಲ್ಲಿ ತೊಗರಿ ಮತ್ತು ಭತ್ತ ಖರೀದಿ ಮುಂದಾಗಲಿದೆ ಎಂದರು.

ಹಿಂದಿನ ವರ್ಷದಲ್ಲಿ ರಾಜ್ಯ ಸರ್ಕಾರ 33 ಲಕ್ಷ ಕ್ವಿಂಟಲ್ ತೊಗರಿ ಖರೀದಿ ಮಾಡಿ ಪಡಿತರದಲ್ಲಿ ಹಂಚಿತ್ತು, ಪ್ರಸುತ್ತ ವರ್ಷದಲ್ಲಿ ಹೆಸರು ಮತ್ತು ಕಡಲೆಯನ್ನು ಸಹ ಖರೀದಿ ಮಾಡಿ ಪಡಿತರದಲ್ಲಿ ನೀಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ.

ಮೆಕ್ಕೆಜೋಳ ಖರೀದಿಗೂ ಸಹ ಸಿದ್ಧತೆ ಮಾಡಿಕೊಳ್ಳುತ್ತಿದೆ. ಆದರೆ ಕೇಂದ್ರ ಸರ್ಕಾರ ಸಹಾಯ ಕೇಳಿದರೆ ಪಡಿತರದಲ್ಲಿ ಉಪಯೋಗಿಸುವುದಾದರೆ ಖರೀದಿಗೆ ಮುಂದಾಗಿ ಎಂದಿದ್ದಾರೆ. ಹಾಗಾಗಿ ಸರ್ಕಾರ ಮೆಕ್ಕೆಜೋಳ ಖರೀದಿಯಲ್ಲಿ ಯೋಚನೆ ಮಾಡಿ ಖರೀದಿಗೆ ಮುಂದಾಗಲಿದೆ. ಜೋಳಕ್ಕೆ 2100 ರೂ. ಬೆಂಬಲ ಬೆಲೆ ನೀಡಲು ಶಿಫಾರಸು ಮಾಡಲಾಗಿದೆ ಎಂದು ತಿಳಿಸಿದರು.

ಬೆಳೆ ದ್ವಿಗುಣಗೊಳ್ಳಿಸುವ ನಿಟ್ಟಿನಲ್ಲಿ ಕಳೆದ ವರ್ಷ ರಾಜ್ಯದ 8 ಜಿಲ್ಲೆಗಳಲ್ಲಿ ಒಂದೊಂದು ಗ್ರಾಮ ಆಯ್ಕೆ ಮಾಡಿಕೊಂಡು ಗ್ರಾಮದಲ್ಲಿರುವ ರೈತರ ಆರೋಗ್ಯ, ಜೀವನ, ನೈರ್ಮಲ್ಯ ಸೇರಿದಂತೆ ಬೆಳೆಗಳ ಬಗ್ಗೆ ದ್ವಿಗುಣ ಮತ್ತು ಪೂರ್ಣ ಪ್ರಮಾಣದ ಬೆಳೆ ಮಾಡುವ ನಿಟ್ಟಿನಲ್ಲಿ ಪರಿಶೀಲನೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಆಯ್ಕೆಗೊಂಡ ಗ್ರಾಮದಲ್ಲಿ ಪ್ರತಿ ಗ್ರಾಮದಲ್ಲಿ 25 ಯುವ ರೈತರನ್ನು ಆಯ್ಕೆ ಮಾಡಿ ಕೃಷಿ ಮೇಳ ಮತ್ತು ಬೆಂಗಳೂರಿನಲ್ಲಿ ತರಬೇತಿ ನೀಡಲಾಗಿದೆ. ಇದರ ಬಗ್ಗೆ ಸಂಪೂರ್ಣ ಮಾಹಿತಿ ಕಲೆ ಹಾಕಿ ವರದಿ ತಯಾರಿಸಲಾಗುತ್ತಿದೆ. ಸರ್ಕಾರದ ಹಲವು ಕಾರ್ಯಕ್ರಮ ಪರಿಣಾಮಕಾರಿಯಾಗಿ ಬಳಕೆಯಾಗಿಲ್ಲ. ಎಲ್ಲ ವರದಿ ಸಿದ್ಧಪಡಿಸಿ ಮುಂದಿನ ಬಜೆಟ್‌ನಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮುಂದುವರಿಸಲಾಗುವುದು ಎಂದರು.